ಓ ಎಸ್ ನಂಃ 203/2015 ಪಿ ಡಬ್ಲ್ಯೂಃ 1

ದಿನಾಂಕಃ 02.03.2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಚ್ ಕೆ ಎಂ ವಕೀಲರಿಂದ

ನಾನು ಬಾದನಹಟ್ಟಿ ಗ್ರಾಮದಲ್ಲಿ ವಾಸವಿದ್ದೇನೆ. ಹಳೇಕೋಟೆ ಗ್ರಾಮದಲ್ಲಿ ಮುರುಸಾಣಿ ಎಂಬ ಕುಟುಂಬಗಳು ತುಂಬಾ ಜನ ಇದ್ದಾರೆ ಎಂದರೆ ಸರಿ. ನಾನು ಅಂಜಿನೇಯನ ಮಗಳು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ನಮ್ಮ ಕುಟಂಬದ ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ. ಅಂಜಿನೇಯನ ತಂದೆಯ ಹೆಸರು ಹನುಮಂತ, ತಾಯಿಯ ಹೆಸರು ಹೊಳೆಮ್ಮ. ಅಂಜಿನೇಯನ ತಂದೆ ಹನುಮಂತನಿಗೆ ಒಟ್ಟು ಆರು ಜನ ಹೆಣ್ಣು ಮಕ್ಕಳು ಮತ್ತು ನಾಲ್ಕು ಗಂಡು ಮಕ್ಕಳು. ಗಂಗಮ್ಮ, ಮಹಾಂಕಾಳಿ, ಸಣ್ಣ ಎಲ್ಲಮ್ಮ, ಮಾರೆಮ್ಮ, ಯಲ್ಲಮ್ಮ, ನಾಗ ಹನುಮೇಶ, ವಿರೇಶ ಅಂತ ಇರುತ್ತಾರೆ. ಅಂಜಿನೇಯನ ಬೇರೆ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ನಾನು ಅಂಜಿನೇಯನ ಮಗಳು ಅಲ್ಲ ಎಂದರೆ ಸರಿಯಲ್ಲ.

2. ದಾವ ಸರ್ವೇ ನಂಃ 24 ಡಿ, 3 ಎಕರೆ 30 ಸೆಂಟ್ಸ್ ಇರುತ್ತದೆ. ದಾವ ಸ್ವತ್ತಿನ ಪೂರ್ವಕ್ಕೆ ಶಂಕರಮ್ಮನ ಜಮೀನು, ಪಶ್ಚಿಮಕ್ಕೆ ಗುಡ್ಡ, ಉತ್ತರಕ್ಕೆ ರೇಣುಕಮ್ಮನ ಜಮೀನು ಮತ್ತು ದಕ್ಷಿಣಕ್ಕೆ ಹಳ್ಳ ಇರುತ್ತದೆ. ಸದರಿ ಚೆಕ್ಕು ಬಂದಿಯನ್ನು ದಾವೆಯಲ್ಲಿ ಬರೆಯಿಸಿರುವುದಿಲ್ಲ. ದಾವ ಸ್ವತ್ತು ಅಂಜಿನೇಯನಿಗೆ ಹೇಗೆ ಬಂತು ಎಂದು ದಾವೆಯಲ್ಲಿ ಹೇಳಿರುತ್ತೇನೆ. ಪಹಣಿಗಳ ಆಧಾರದ ಮೇಲೆ ದಾವೆ ಸಲ್ಲಿಸಿರುತ್ತೇನೆ. ಮತ್ತು ನೊಂದಾಯಿತ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ ನಾನು ಹಾಜರುಪಡಿಸಿರುವ ನಿಪಿ 2 ರಿಂದ 4 ರಲ್ಲಿರುವ ಅಂಜಿನೇಯನಿಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತು ಪ್ರತಿವಾದಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ನಿಪಿ 2 ರಿಂದ 4 ರ ಆಧಾರದ ಮೇಲೆ ನನಗೆ ದಾವ ಸ್ವತ್ತನ್ನು ಹಕ್ಕನು ಕೇಳಲು ಅಧಿಕಾರ

ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡನನ್ನು ನೋಡಿರುತ್ತೇನೆ. ಪ್ರತಿವಾದಿಯ ಗಂಡ ಬದುಕಿದ್ದಾಗ ದಾವ ಸ್ವತ್ತಿನಲ್ಲಿ ಸ್ವಾಧೀನ ಇದ್ದು ಆತ ಸತ್ತ ನಂತರ 1 ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿ.

3. ಪ್ರತಿವಾದಿಯ ಹೆಸರಿಗೆ ಆಗಿರುವ ಹಕ್ಕು ಬದಲಾವಣೆಯನ್ನು ಪ್ರಶ್ನಿಸಿ ನಾನು ಎ.ಸಿ. ನ್ಯಾಯಾಲಯದಲ್ಲಿ ಆರ್ಜಿ ಸಲ್ಲಿಸಿರುತ್ತೇನೆ. ಮಾರಯ್ಯ, ಪಕ್ಕೀರಯ್ಯ ಮತ್ತು ಮಲ್ಲಯ್ಯ ಹಳೇಕೋಟೆ ಗ್ರಾಮದ ವಾಸಿಗಳು ನನಗೆ ಪರಿಚಯ. ಪ್ರತಿವಾದಿ ಸದರಿ ವ್ಯಕ್ತಿಗಳ ವಿರುದ್ಧ ಅಸಲು ದಾವೆ ಸಂಃ 104/2015 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆ ಪ್ರತಿವಾದಿಯ ಪರವಾಗಿ ತೀರ್ಮಾನವಾಗಿರುತ್ತದೆ ಎಂದರೆ ಸರಿ. ಸದರಿ ಮಾರಯ್ಯ, ಪಕ್ಕೀರಯ್ಯ ಮತ್ತು ಮಲ್ಲಯ್ಯ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆಂದರೆ ಸರಿಯಲ್ಲ. ನಾನು ಅಸಲು ದಾವೆ ಸಂಃ 104/2015 ರ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಾನು ಮಾರಯ್ಯ, ಪಕ್ಕೀರಯ್ಯ ಮತ್ತು ಮಲ್ಲಯ್ಯನ ಮಾತು ಕೇಳಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಕಾರಣ ಇಲ್ಲದಿದ್ದರೂ ಕೂಡ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

**OS No. 203/2015**

ಸಿವಿಲ್ ನ್ಯಾಯಾಧೀಶರು ಸಿರುಗುಪ್ಪ.